## ರಾಜ್ಯದಲ್ಲಿ ಅರಣ್ಯ ಪ್ರದೇಶ

*೫೨೨ ಶ್ರೀ ಆರ್. ವೆಂಕಟರಾಮಯ್ಯ (ವಂಡಳಿಬಾಗಿಲು).— ದಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿರುವ ಅರಣ್ಯ ಪ್ರದೇಶಗಳೆಷ್ಟು?

(ಆ) ಅರಣ್ಯ ಪ್ರದೇಶವನ್ನು ನೋಡಿಕೊಳ್ಳಲು ತಾಲ್ಲೂಕು ಮಟ್ಟದಲ್ಲಿರುವ ಅರಣ್ಯ ವಲಯಾಧಿಕಾರಿಗಳೆಷ್ಟಿದ್ದಾರೆ ?

(ಇ) ಹಾಗಿದ್ದಲ್ಲಿ ಅವರು ತಾಲ್ಲೂಕು ಮಟ್ಟದ ಅಧಿಕಾರಿಗಳಲ್ಲವೆ ?

(ಈ) ಅವರಿಗೆ ಇತರ ತಾಲ್ಲೂಕು ಮಟ್ಟದ ಅಧಿಕಾರಿಗಳಿಗಿರುವಂತೆ ಸಂಬಳ ಸಾರಿಗೆ ಸೌಕರ್ಯಗಳಿವೆಯೆ ?

(ಉ) ಅರಣ್ಯ ವಲಯಾಧಿಕಾರಿಗಳು ಅವರ ಹುದ್ದೆಯನ್ನು ಮೇಲ್ದರ್ಜೆಗೆ ಏರಿಸಬೇಕೆಂದು ಮನವಿ ಅರ್ಪಿಸಿದ್ದು ನಿಜವೆ ?

(ಊ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—

(ಅ) ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶವಾದ ೧,೯೧,೭೭,೩೦೦ ಹೆಕ್ಟೇರಿನಲ್ಲಿ ೩೮,೩೮,೪೦೬ ಹೆಕ್ಟೇರಿನಷ್ಟು ಅಂದರೆ ಶೇಕಡ ೨೦ ಅರಣ್ಯ ಪ್ರದೇಶವಾಗಿರುತ್ತೆ.

(೧) ಕಾಯ್ದಿರಿಸಲಾದ ಅರಣ್ಯ ಪ್ರದೇಶ ... ೨೮,೪೦,೦೪೭ ಹೆಕ್ಟೇರುಗಳು (ಶೇಕಡ ೧೪.೮)

(೨) ಬೇರೆ ವರ್ಗಕ್ಕೆ ಸೇರಿದ ಅರಣ್ಯ ಪ್ರದೇಶ ... ೯,೯೮,೩೫೯ ಹೆಕ್ಟೇರುಗಳು (ಶೇಕಡ ೫.೨)

(ಆ) ಮೊದಲನೆ ದರ್ಜೆ ಅರಣ್ಯಾಧಿಕಾರಿಗಳು ... ೧೧೬
'ಬಿ' ವರ್ಗದ ಅಧಿಕಾರಿಗಳು

ಎರಡನೇ ದರ್ಜೆ ಅರಣ್ಯಾಧಿಕಾರಿಗಳು ... ೬೫೭
(ರಾಜತಾಂತ್ರಿಕರಲ್ಲದ 'ಸಿ' ವರ್ಗದ ಅಧಿಕಾರಿಗಳು

(ಇ) ಒಟ್ಟು ೧೭೫ ತಾಲ್ಲೂಕುಗಳಲ್ಲಿ ೬೭೩ ಹುದ್ದೆಗಳು ಇರುತ್ತವೆ. ಅರಣ್ಯ ಇಲಾಖೆಯು ಹುದ್ದೆ ಪುನರ್ರಚನೆ ನೇಮಕಾತಿ ನಿಯಮಾವಳಿಯ ಪ್ರಕಾರ ಎರಡು ಶ್ರೇಣಿಗಳನ್ನು ವರ್ಗೀಕರಿಸಲಾಗಿದೆ.

ಮೊದಲನೆ ಶ್ರೇಣಿಗೆ ಸೇರಿದ ೧೧೬ ಹುದ್ದೆಗಳ ಹೊರತು ಉಳಿದ ೬೫೭ ಎರಡನೇ ಶ್ರೇಣಿಗೆ ಸೇರಿದ ವಲಯ ಅರಣ್ಯಾಧಿಕಾರಿಗಳನ್ನು ತಾಲ್ಲೂಕು ಮಟ್ಟದ ರಾಜತಾಂತ್ರಿಕರಲ್ಲದ (Non Gazetted Officials) ಅಧಿಕಾರಿಗಳಾಗಿ ವರ್ಗೀಕರಿಸಲ್ಪಟ್ಟಿದೆ.

(ಈ) ಇಲ್ಲ. ತಾಲ್ಲೂಕು ಮಟ್ಟದಲ್ಲಿರುವ ಎಲ್ಲ ಅಧಿಕಾರಿಗಳಿಗೂ ರಾಜತಾಂತ್ರಿಕರಾಗಿದ್ದಾಗ್ಯೂ ಸಹ ಒಂದೇ ಸಮನಾದ ವೇತನಶ್ರೇಣಿ ಕೊಟ್ಟಿರುವುದಿಲ್ಲ.

ಉದಾಹರಣೆ

| | |
|---|---|
| ಸಹಾಯಕ ಅರಣ್ಯ ಸಂರಕ್ಷಕರು<br>ತಹಶೀಲ್ದಾರರ<br>ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು | ಹಿಂದಿನ ವೇತನ ಆಯೋಗದ ಶಿಫಾರಸ್ಸಿನಂತೆ ೧೦ನೇ ಶ್ರೇಣಿಯಾಗಿ ವರ್ಗೀಕರಿಸಿ ಈಗಿನ ವೇತನಶ್ರೇಣಿ ರೂ. ೧೦೫೦-೧೯೫೦ನ್ನು ಕೊಡಲಾಗಿದೆ |

ಈ ಕೆಳಗೆ ಕಾಣಿಸಿದ ತಾಲ್ಲೂಕು ಮಟ್ಟದ ಅಧಿಕಾರಿಗಳ ವೇತನ ಶ್ರೇಣಿಯಲ್ಲಿ ವ್ಯತ್ಯಾಸವಿರುತ್ತದೆ.

ಸಹಾಯಕ ವ್ಯವಸಾಯಾಧಿಕಾರಿ ... ವೇತನ ಶ್ರೇಣಿ ರೂ. ೧೨೦೦–೨೧೭೫

ಸಹಾಯಕ ಅಭಿಯಂತರರು ... ,,

ಆದಾಗ್ಯೂ ವೇತನ ಆಯೋಗದ ಶಿಫಾರಸ್ಸಿನ ಮೇರೆಗೆ ವಲಯ ಅರಣ್ಯಾಧಿಕಾರಿಗಳನ್ನು ಏನೇ ವರ್ಗವಾಗಿ ವರ್ಗೀಕರಿಸಿ ಈಗಿನ ವೇತನ ಶ್ರೇಣಿಯನ್ನು ಈ ಕೆಳಕಂಡಂತೆ ಕೊಡಲಾಗಿದೆ.

ಮೊದಲನೆ ದರ್ಜೆ ಅರಣ್ಯಾಧಿಕಾರಿಗಳು (೧೧೬ ಹುದ್ದೆಗಳು)

ವರ್ಗ 'ಬಿ' ರೂ. ೯೨೦–೧೭೨೫

ಎರಡನೇ ದರ್ಜೆ ವಲಯ ಅರಣ್ಯಾಧಿಕಾರಿಗಳು

ರಾಜತಾಂತ್ರಿಕರಲ್ಲದ ವರ್ಗ 'ಸಿ' (೬೫೭ ಹುದ್ದೆಗಳು) ರೂ. ೬೭೫–೧೩೨೦

(ಉ) ಇಲ್ಲ. ಅವರು ಹುದ್ದೆಗಳ ಉನ್ನತೀಕರಣಕ್ಕಾಗಿ ಪ್ರಾರ್ಥಿಸಿಕೊಂಡಿಲ್ಲ. ಆದರೆ ವಲಯ ಅರಣ್ಯಾಧಿಕಾರಿಗಳ ಸಂಘವು ಎರಡು ವರ್ಗಗಳನ್ನು ರೂ. ೯೨೦ ೧೭೨೫ರ ಶ್ರೇಣಿಯಲ್ಲಿ ಒಂದೇ ವರ್ಗವನ್ನಾಗಿ ಸಂಯೋಜಿಸುವಂತೆಯೂ ಮತ್ತು ೧೦ನೇ ವರ್ಗಕ್ಕೆ ಸಂಬಂಧಪಟ್ಟ ವೇತನಶ್ರೇಣಿ ರೂ. ೧೦೫೦–೧೯೫೦ ವೇತನ ಶ್ರೇಣಿಯನ್ನು ನಿಗದಿಗೊಳಿಸಲು ಬೇಡಿಕೆಯನ್ನು ಮಂಡಿಸಿರುತ್ತಾರೆ.

(ಊ) ವಲಯ ಅರಣ್ಯಾಧಿಕಾರಿಗಳ ಹುದ್ದೆಯನ್ನು ಒಂದೇ ವರ್ಗದಲ್ಲಿ ತರಲು ಅರಣ್ಯ ಇಲಾಖೆಯ ಹುದ್ದೆಯನ್ನು ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿಯನ್ನು ತರುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಪುನರ್ವಿಮರ್ಶಿತ ವೇತನ ಶ್ರೇಣಿಯ ಬಗ್ಗೆ ಇರುವ ಬೇಡಿಕೆಗಳನ್ನು ಮುಂದಿನ ವೇತನ ಆಯೋಗದಿಂದ ಪರಿಶೀಲಿಸಲ್ಪಡುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ನೂರಾರು ಕೋಟಿ ರೂಪಾಯಿಗಳ ಬೆಲೆ ಬಾಳುವಂತಹ ಅರಣ್ಯ ಸಂಪತ್ತು ತಮಿಳುನಾಡು ಹಾಗೂ ಕೇರಳ ರಾಜ್ಯಗಳಿಗೆ ಕಳ್ಳಸಾಗಾಣಿಕೆಯಲ್ಲಿ ಸಾಗಿಸಲ್ಪಡುತ್ತಿದೆಯಲ್ಲವೇ ? ಇದನ್ನು ತಡೆಗಟ್ಟಲು ಈಗ ಇರತಕ್ಕ ೬೯೫ ಅರಣ್ಯಾಧಿಕಾರಿಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕು ಎನ್ನುವ ಬೇಡಿಕೆ ಸರ್ಕಾರಕ್ಕೆ ಬಂದಿಲ್ಲವೇ ? ಇದನ್ನು ಈಡೇರಿಸಂವುದರಿಂದ ಅರಣ್ಯ ಸಂಪತ್ತನ್ನು ಕಾಪಾಡಬಹುದಲ್ಲವೇ ? ಈ ಅಧಿಕಾರಿಗಳನ್ನು ಸಹಾಯಕ ಅರಣ್ಯ ಸಂರಕ್ಷಕರು, ತಹಶೀಲ್ದಾರರು, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಇರುವಂತೆ ೩ ಗ್ರೇಡ್ ಮಾಡಬೇಕು. ಎಲ್ಲಿ ನೋಡಿದರೂ ಶಿರಸ್ತೆದಾರರ ಗ್ರೇಡನ್ನು ಇವರಿಗೆ ಅನ್ವಯಿಸಿದ್ದೀರಿ. ಇದರಿಗೆ ಅಧಿಕಾರ ಇಲ್ಲದೇ ಇರುವುದರಿಂದ ವಿಪರೀತ ಭ್ರಷ್ಟಾಚಾರಕ್ಕೆ ಎಡೆಯಾಗಿದೆ. ಇದನ್ನು ಸರಿಪಡಿಸಲು, ಅಧಿಕಾರಿಗಳಿಗೆ ಹೆಚ್ಚಿನ ದರ್ಜೆಯಂನ್ನು ಕೊಟ್ಟು ಹೆಚ್ಚಿನ ಜವಾಬ್ದಾರಿಯನ್ನು ಇವರಿಗೆ ಕೊಡುವುದರಿಂದ ಭ್ರಷ್ಟಾಚಾರವನ್ನು ಕಡಿಮೆ ಮಾಡಿದಂತಾಗುತ್ತದೆಯಲ್ಲವೆ ?

ಶ್ರೀ ಬಿ. ಎ. ಜೀವಿಜಯ.—ಅಧ್ಯಕ್ಷರೇ, ಕೇರಳಕ್ಕೆ ನೂರಾರು ಕೋಟಿ ರೂಪಾಯಿಗಳ ಅರಣ್ಯ ಸಂಪತ್ತು ಕಳ್ಳಸಾಗಾಣಿಕೆಯಾಗುತ್ತದೆಂದು ಹೇಳುವುದು ಸರಿಯಲ್ಲ. ಅರಣ್ಯದಿಂದ ಏನೂ ಕಳ್ಳಸಾಗಾಣಿಕೆ ಆಗುತ್ತಾ ಇಲ್ಲ. ನಾವು ಮಾಕೂಟ ಗೇಟ್‌ನಲ್ಲಿ ಬಿಗಿಯಾದ ವ್ಯವಸ್ಥೆಯನ್ನು ಮಾಡಿದ್ದೇವೆ. ಅಲ್ಲಿ ಯಾವ ಕಳ್ಳಸಾಗಾಣಿಕೆಯೂ ಆಗುತ್ತಾ ಇಲ್ಲ. ಅರಣ್ಯ ಅಧಿಕಾರಿಗಳು, ವಲಯ ಅಧಿಕಾರಿಗಳು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ಅದರಲ್ಲಿ ಮೊದಲನೆಯ ಮತ್ತು ಎರಡನೆಯ ಗ್ರೇಡನ್ನು ಒಟ್ಟಿಗೆ ಸೇರಿಸಿ ಒಂದೇ ಶ್ರೇಣಿ ಮಾಡಬೇಕೆಂದು ಬೇಡಿಕೆಯನ್ನು ಸಲ್ಲಿಸಿದ್ದರು. ಇದರ ಜೊತೆಗೆ ಸಹಾಯಕ ಅರಣ್ಯ ಸಂರಕ್ಷಕರು, ಅರಣ್ಯ ಸಂರಕ್ಷಕರು, ವಾಚರ್ಸ್ ಎಲ್ಲಾ ಒಟ್ಟಿಗೆ ಸೇರಿ ಅವರ ಒಂದೂ ಬೇಡಿಕೆಯನ್ನು ಸಲ್ಲಿಸಿದ್ದಾರೆ. ಕಳೆದ ತಿಂಗಳು ೧೧ ಮತ್ತು ೧೬ನೇ ತಾರೀಖು ಅವರನ್ನು ಕರೆದು ಚರ್ಚೆ ಮಾಡಲಾಗಿದೆ. ಹೊರ ರಾಜ್ಯಗಳಲ್ಲಿ ಯಾವ ರೀತಿ ವೇತನ ಶ್ರೇಣಿ ಇದೆಯೋ ಆ ರೀತಿ ಇಲ್ಲೂ ಕೂಡ ಮಾಡಬೇಕೆಂದು ಸರ್ಕಾರ ವಿಮರ್ಶೆ ಮಾಡುತ್ತಾ ಇದೆ. ಈ ಒಂದು ವಿಷಯ ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಶ್ರೀ ಆರ್. ವೆಂಕಟರಾವಮಯ್ಯ.—ಅಧ್ಯಕ್ಷರೇ...

ಅಧ್ಯಕ್ಷರು.—ವಂಂದಿನ ಪ್ರಶ್ನೆಗೆ ಹೋಗೋಣ. ಈಗ ನೀವು ಪ್ರಶ್ನೆ ಕೇಳಲು ಸವಂಯ ಇಲ್ಲ. ದಯವಿಟ್ಟು ಕೂಡಿ.

ಶ್ರೀ ಆರ್. ವೆಂಕಟರಾವಂಯ್ಯ.—ಒಂದೇ ಒಂದು ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು.—ನಾನು ಬೇಡ ಎಂದರೂ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ,

## ಸಂಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಬರುವ ಆಲೆಚ್ಚಿ–ಕೋಲ್ಚಾರು–ಬಂದಡ್ಕ ರಸ್ತೆ, (ಉದ್ದ 4 ಕಿ.ಮೀ.) ನಿರ್ಮಾಣ ಕುರಿತು.

೫೧೩, ಶ್ರೀ ಕೆ. ಕುಶಾಲಪ್ಪ (ಸುಳ್ಯ) —ಮಾನ್ಯ ಲೋಕೋಪಯೋಗಿ ಹಾಗೂ ಜಲಾನಯನ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಳ್ಯ ವಿಧಾನ ಸಭಾ ಕ್ಷೇತ್ರದ ಆಲೆಚ್ಚಿ ಕೋಲ್ಚಾರು ಬಂದಡ್ಕ ರಸ್ತೆ ನಿರ್ಮಾಣ ಳ ಕಿ.ಮಿ. ಕೇರಳ ರಾಜ್ಯ ಗಡಿವರೆಗೆ ಲೋಕೋಪಯೋಗಿ ಇಲಾಖೆಯಿಂದ ನಂ. ಳಿ೧೧ : ಸಿಆರ್/೭ ದಿನಾಂಕ ೨೫–೩–೧೯೭೮ ರಂತೆ ವಂಜೂರಾಗಿದ್ದರೂ ಈ ರಸ್ತೆಯು ಕಾಮಗಾರಿ ಈ ತನಕ ಕೈಕೊಳ್ಳದೆ ಇರಲು ಕಾರಣವೇನು ;

ಆ) ಈ ರಸ್ತೆ ಕಾಮಗಾರಿಯಂನ್ನು ಈಗಲಾದರೂ ಕೈಕೊಳ್ಳಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು,).—

ಅ ಮತ್ತು ಆ :

೧೦.೨೦ ಕಿ.ಮೀ. ಉದ್ದದ ಈ ರಸ್ತೆಯನ್ನು ೨೫–೩–೧೯೭೮ ರಂದು ವಂದಿನ ಅಭಿವೃದ್ಧಿ ಮತ್ತು ದುರಸ್ತಿಗಾಗಿ ಲೋಕೋಪಯೋಗಿ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲಾಯಿತು. ಅಂದಿನಿಂದ ಪ್ರತಿ ವರ್ಷವೂ ಲಭ್ಯವಾಗುತ್ತಿರುವ ಹಣಕ್ಕೆ ಅನುಗುಣವಾಗಿ ಅಭಿವೃದ್ಧಿ ಹಾಗೂ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಈ ರಸ್ತೆಯಲ್ಲಿ ೮ ಕಲ್ವರ್ಟ್‌ಗಳನ್ನು ಕಟ್ಟಿದೆ, ಮತ್ತು ಕೆಲವು ಭಾಗಗಳಿಗೆ ಜಲ್ಲಿಯಂನ್ನು ಹಾಕಲಾಗಿದೆ ; ಈವರೆಗೆ ಸು.೫೧,೫೦,೩೦೦ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಇದನ್ನು ಸರ್ವಋತು ರಸ್ತೆ ಮಾಡಬೇಕೆಂದರೆ ಸಂಮಾರು ೧೫ ಲಕ್ಷ ರೂಪಾಯಿಗಳು ಬೇಕಾಗುತ್ತದೆ.

ಶ್ರೀ ಕೆ, ಕುಶಾಲಪ್ಪ.—ಅಧ್ಯಕ್ಷರೇ ೧೦.೨೦ ಕಿ.ಮಿಾಟರ್ ಆಲೆಚ್ಚಿ–ಕೋಲ್ಚಾರು ರಸ್ತೆಯಾಗಿರುತ್ತದೆ. ಈ ನೇರ ರಸ್ತೆ ಇನ್ನೂ ವರೆಗೂ ರಿಪೇರಿಯಾಗಿಲ್ಲ. ಇದಕ್ಕೆ ಅರಣ್ಯ ಇಲಾಖೆಯವರು ಆಕ್ಷೇಪ ಮಾಡುತ್ತಿದ್ದಾರೆ. ಲೋಕೋಪಯೋಗಿ ಇಲಾಖೆಯವರು ಇದನ್ನು ವಶಕ್ಕೆ ತೆಗೆದುಕೊಂಡಿದ್ದರೂ ಅರಣ್ಯ ಇಲಾಖೆಯವರು ರಸ್ತೆಯಲ್ಲಿ ಗುಂಡಿ ತೋಡಿದ್ದಾರೆ. ಈ ರಸ್ತೆಯಿಂದ ಸಾಗವಾನಿ ಮರ ಹಾಗೂ ರಬ್ಬರ್ ಕಳ್ಳಸಾಗಣೆ ಆಗುತ್ತಿದೆ. ಸಾರ್ವಜನಿಕರಿಗಾಗಿ ಇದನ್ನು ದುರಸ್ತಿ ಮಾಡಿದರೆ ಕಳ್ಳಸಾಗಾಣಿಕೆ ಮಾಡುವವರಿಗೆ ತೊಂದರೆಯಾಗುತ್ತದೆಂದು ಇದನ್ನು ರಿಪೇರಿ ಮಾಡುತ್ತಿಲ್ಲ. ಕಳೆದ ಸಲ ಇದೇ ರಸ್ತೆಯಲ್ಲಿ ಮೂರು ಕೊಲೆಗಳು ಆಗಿವೆ. ಈ ರಸ್ತೆ ದುರಸ್ತಿಯಾಗದಿದ್ದರೆ ಈ ರಸ್ತೆಯಲ್ಲಿ ಇನ್ನೂ ಕೊಲೆಗಳು ದರೋಡೆಗಳು ಮುಂದುವರಿಯುತ್ತವೆ. ಅರಣ್ಯ ಇಲಾಖೆಯ ಅವರ ಆಕ್ಷೇಪದ ಕಡೆ ಗಮನ ಕೊಟ್ಟು ಈ ರಸ್ತೆಯನ್ನು ದುರಸ್ತಿ ಮಾಡಿ ಸಾರ್ವಜನಿಕರು ಇಲ್ಲಿ ನಿರಾಯಾಸವಾಗಿ ಸಂಚಾರ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರೇ ಮಾನ್ಯ ಸದಸ್ಯರು ಏನು ಸವಂಸ್ಯೆಯನ್ನು ಹೇಳಿದ್ದಾರೆ ಅದು ನನಗೆ ಬಂದಿರತಕ್ಕ ವರದಿಯಲ್ಲಿ ಇಲ್ಲ. ೧೯೭೫ರಲ್ಲಿ ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆ ಎಂದು ಕನ್‌ವರ್ಟ್ ಮಾಡಲಾಗಿದೆ. ಫಾರೆಸ್ಟ್ ಇಲಾಖೆಯವರು ಇದಕ್ಕೆ ತಕರಾರು ತೆಗೆದಿದ್ದಾರೆ ಎಂಬ ವಿಷಯ ನನ್ನ ಮುಂದೆ ಇಲ್ಲ. ಇದು ಏನೇ ಇರಲಿ ಇದರ ಉಳಿದ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ೧೫ ಲಕ್ಷ ರೂಪಾಯಿಗಳು ಬೇಕಾಗುತ್ತದೆಂದು ವರದಿ ಇದೆ. ಇದು ಅತ್ಯಂತ ಮುಖ್ಯ ರಸ್ತೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದುದರಿಂದ ಮುಂದಿನ ೧೯೮೬–